ಒ.ಎಸ್.ನಂ:26/2022
ಪಿ.ಡಬ್ಲೂ.1

**<u>ದಿ:19.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲು:-</u>**ಪ್ರತಿವಾದಿ ನಂ.**1** ಪರ ಶ್ರೀ.**G.S.L** ವಕೀಲರಿಂದ:**-**

ನನ್ನ ಅಜ್ಜನ ಹೆಸರು ಹನುಮಂತಪ್ಪ ಇರುತ್ತಾರೆ . ಸದರಿ ಹನುಮಂತಪ್ಪ ಅವರ ತಂದೆ ಹೆಸರು ನರಸಿಂಹಪ್ಪ ಇರುತ್ತದೆ . ಸದರಿ ನರಸಿಂಹಪ್ಪ ಅವರು ಗಂಗಮ್ಮ ಮತ್ತು ಸಿದ್ದಮ್ಮ ಅವರನ್ನು ಮದುವೆ ಆಗಿರುತ್ತಾರೆ . ಸದರಿ ಗಂಗಮ್ಮ ಅವರಿಗೆ ಯಾವುದೇ ಮಕ್ಕಳು ಇರುವುದಿಲ್ಲ . ಸಿದ್ದಮ ಅವರಿಗೆ ಹನುಮಂತಪ್ಪ , ನಾಗೇಂದ್ರಪ್ಪ , ದೇವೇಂದ್ರಪ್ಪ , ಊಲೆಮ್ಮ , ಸೀತಮ್ಮ ಮತ್ತು ಲಕ್ಷ್ಮಿದೇವಿ ಎಂಬ 6 ಜನ ಮಕ್ಕಳು ಇರುತ್ತಾರೆ . ಸದರಿ ನರಸಿಂಹಪ್ಪರವರಿಗೆ ಸೇರಿದ ಆಸ್ತಿಯನ್ನು ಅವರ ಮಕ್ಕಳಾದ ನನ್ನ ಅಜ್ಜ ಹನುಮಂತಪ್ಪ , ನಾಗೇಂದ್ರಪ್ಪ ಮತ್ತು ತಿಪ್ಪೇಸ್ವಾಮಿ ಅವರು ಪಾಲುವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ಪಾಲುವಿಭಾಗ ದಿ: 10.06.1974 ರಲ್ಲಿ ಆಗಿರುತ್ತದೆ ಎಂದರೆ ಸರಿ. ನರಸಿಂಹಪ್ಪ ಅವರ ಗಂಡು ಮಕ್ಕಳ ಹೆಸರು ಹನುಮಂತಪ್ಪ, ತಿಪ್ಪೇಸ್ವಾಮಿ ಮತ್ತು ದೇವೇಂದ್ರಪ್ಪ ಇರುತ್ತರೆ ಎಂದರೆ ಸರಿ. ಸದರಿ ಪಾಲುವಿಭಾಗದಂತೆ ನನ್ನ ಅಜ್ಜನಾದ ಹನುಮಂತಪ್ಪ ಅವರಿಗೆ ಸರ್ವೆ ನಂ.88/3 ರಲ್ಲಿ 12 ಎಕರೆ 28 ಗುಂಟೆ ಪಾಲು ಬಂದಿರುತ್ತದೆ ಎಂದರೆ ಸರಿ. ಸದರಿ ಪಾಲು ಬಂದ ನಂತರ ನರಸಿಂಹಪ್ಪನವರ ಮಕ್ಕಳು ಒಟ್ಟು ಕುಟುಂಬದಲ್ಲಿ ಇಲ್ಲದೇ ಬೇರೆಯಾಗಿ ವಾಸ ಮಾಡುತ್ತಿದ್ದರು ಎಂದರೆ ಸರಿ . ದಿ: 10.06.1974 ರಲ್ಲಿ ಆದ ಪಾಲುವಿಭಾಗದ ಪತ್ರವನ್ನು ನ್ಯಾಯಾಲಯಲಕ್ಕೆ ಹಾಜರುಪಡಿಸಿರುವುದಿಲ್ಲ .

ನನ್ನ ಅಜ್ಜ ಹನುಮಂತಪ್ಪ ಅವರಿಗೆ ನರಸಿಂಹಪ್ಪ , ರಾಮಣ್ಣ , ನನ್ನ ತಂದೆ ಬೀಮಣ್ಣ, ಬಸವರಾಜ್ , ಹಿರಿಯಮ್ಮ , ಶಾರದ , ವಜಜಾಕ್ಷಿ , ಜಲಜಾಕ್ಷಿ , ಭಾಗ್ಯಮ್ಮ ಮತ್ತು ನಾಗವೇಣಿ ಒಟ್ಟು 10 ಜನ ಮಕ್ಕಳು ಇರುತ್ತಾರೆ . ಸದರಿ ಹನುಮಂತಪ್ಪ ಅವರು ಮರಣಾ ನಂತರ ನನ್ನ ಅಜ್ಜಿ ಲಕ್ಷ್ಮಮ್ಮ ಅವರಿಗೆ ಸರ್ವೆ ನಂ.88/3 ರ 12 ಎಕರೆ 28 ಗುಂಟೆ ಪೌತಿ ಖಾತೆ ಆಗಿರುತ್ತದೆ ಎಂದರೆ ಸರಿ.

ನಂತರ ಸನ್ 1999 ರಲ್ಲಿ ನನ್ನ ಅಜ್ಜಿ ಲಕ್ಷ್ಮಮ್ಮ ಮತ್ತು ನಮ್ಮ ತಂದೆ, ರಾಮಣ್ಣ, ನರಸಿಂಹಪ್ಪ

ಮತ್ತು ಬಸವರಾಜ್ ಅವರು ಬಾಯಿ ಮಾತಿನಿಂದ ಪರಿಕತ್ ಪಾಲುವಿಭಾಗ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ಅದೇ ರೀತಿ ದಿ: 25.02.2003 ರಲ್ಲಿ ಲಿಖಿತವಾಗಿ ನೊಂದಾವಣೆ ಪಾಲುವಿಭಾಗಪತ್ರ ಎಸ್.ಆರ್. 344/2003-04 ರಂತೆ ಪಾಲುವಿಭಾಗ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ಅದರಂತೆ ನನ್ನ ತಂದೆಯು ದಾವಾ ಆಸ್ತಿಯನ್ನುಸ್ವಯಾರ್ಜಿತವಾಗಿ ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ಪಾಲುವಿಭಾಗ ನಂತರ ದಾವಾ ಅಸ್ತಿಯು ಸ್ವಂತ ಅವರ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ , ನಮಗೆ ಪಿತ್ರಾರ್ಜಿತ ಆಸ್ತಿಯಾಗಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಿ: 25.02.2003 ರಲ್ಲಿ ಪಾಲುವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ . ಸದರಿ ಪಾಲುವಿಭಾಗ ನಂತರ ನನ್ನ ತಂದೆ ಮತ್ತು ಅವರ ಸಹೋದರರರು ಪ್ರತ್ಯೇಕವಾಗಿ ವಾಸಮಾಡಿಕೊಂಡು ಇರುತ್ತಾರೆ ಎಂದರೆ ಸರಿ. ನಮ್ಮ ತಂದೆ ತಾಯಿ ನನ್ನ ಮತ್ತು ವಾದಿ 1 ಮತ್ತು ನನ್ನ ಮದುವೆಯನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನಮ್ಮ ತಂದೆ ಮಧ್ಯಪಾನ ಮಾಡಿಕೊಂಡು ಇದ್ದ ಕಾರಣ ನಾವು ನಮ್ಮ ತಾಯಿಯ ಮನೆಯಲ್ಲಿ ಆಶ್ರಯ ಇದ್ದೇವು ಎಂದು ಹೇಳುತ್ತಾರೆ . ನನ್ನ ಮದುವೆ ಖರ್ಚಿಗೆ ಮಾಡಿದ ಕೈಗಡ ಸಾಲವನ್ನು ತೀರಿಸಲು ಪ್ರತಿವಾದಿ 2 ಮತ್ತು ನನ್ನ ತಂದೆಯವರು ಪ್ರತಿವಾದಿ 1 ರವರಿಗೆ ದಿ: 05.06.2009 ರಲ್ಲಿ ನಿಪಿ 1 ಕ್ರಯಪತ್ರದಂತೆ ದಾವಾ ಆಸ್ತಿಯನ್ನು ಮಾರಾಟ ಮಾಡುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನದಿಂದ ಪ್ರತಿವಾದಿ 1 ರವರು ದಾವಾ ಆಸ್ತಿಯಲ್ಲಿ ಖಾತೆ ಬದಲಾವಣೆ ಮಾಡಿಸಿಕೊಂಡು ಸ್ವಾಧೀನ ಅನುಭವ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಈಗ ಪ್ರತಿವಾದಿ 1 ರವರು ದಾವಾ ಆಸ್ತಿಯಲ್ಲಿ ಉಳುಮೆ ಮಾಡುತ್ತಾರೆ ಎಂದರೆ ಸರಿ. ನಮ್ಮ ತಂದೆಯ ಸನ್ 2021 ಮರಣದ ನಂತರ ಸದರಿ ಕ್ರಯ ಪತ್ರದ ಬಗ್ಗೆ ನಮಗೆ ಮಾಹಿತಿ ತಿಳಿಯುತ್ತದೆ . ನಿಪಿ 1 ಕ್ರಯಪತ್ರದಲ್ಲಿ ನಮ್ಮ ತಂದೆ ಮತ್ತು ತಾಯಿ ಇಬ್ಬರು ಒಪ್ಪಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರವನ್ನು 3 ವರ್ಷದೊಳಗೆ ನಾವು ಸಂಬಂದ ಪಟ್ಟ ಇಲಾಖೆಯಲ್ಲಿ ರದ್ದುಗೊಳಿಸಲು ಕಾನೂನು ಕ್ರಮ ತಗೆದುಕೊಂಡಿರುತೀರ ಎಂದರೆ ಸಾಕ್ಷಿ ನಮ್ಮ ತಂದೆಯ ಮರಣದನಂತರ ತಿಳಿಯುತ್ತದೆ ಎಂದು ಹೇಳುತ್ತಾರೆ . ಪ್ರತಿವಾದಿ 1 ರವರು ದಾವಾ ಆಸ್ತಿಯನ್ನು ದಾಖಲೆಗಳನ್ನು ಪರಿಶೀಲನೆ ಮಾಡಿದ ನಂತರ ಅವರಿಗೆ ಸ್ವಯಾರ್ಜಿತವಾಗಿ ಬಂದಂತ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಒ.ಎಸ್.ನಂ:26/2022
ಪಿ.ಡಬ್ಲೂ.1

ನಮಗೆ ಈ ದಾವೆಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಗೆ ವಿಚಾರ ಎಲ್ಲಾ ಗೊತ್ತಿದ್ದರು ಸಹ ನಮ್ಮ ತಾಯಿಯೊಂದಿಗೆ ಶಾಮೀಲಾಗಿ ನಾವುಗಳು ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮಾರಾಟ ಆದ ಬಗ್ಗೆ ನಮಗೆ ಗೊತ್ತಿದ್ದರು ಸಹ ಪ್ರತಿವಾದಿಗೆ ತೊಂದರೆ ನೀಡಲು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

( ಪ್ರತಿವಾದಿ 2 ರವರು ತಕರಾರು ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲಎಂದು ತಗೆದುಕೊಳ್ಳಲಾಯಿತು )

<u>ಮರು ವಿಚಾರಣೆ:</u> ಇರುವುದಿಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸರಿ ಇದೆ

Sd/-
ಸಿವಿಲ್ ನ್ಯಾಯಾಧೀಶರು, ಜಗಳೂರು